**ದಿನಾಂಕ: 03.02.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪಿರ್ಯಾದಿದಾರರ ಪರ ಶ್ರೀ.ಎಸ್ ಹೆಚ್ ಎಸ್ ವಕೀಲರಿಂದಃ**

ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಹೆಂಡತಿ ವಾಸವಾಗಿರುತ್ತೇವೆ. ನಮ್ಮ ಮನೆಯ ಹಿರಿತವನ್ನು ನಾನೇ ಮಾಡುತ್ತೇನೆ. ನಮ್ಮ ಮನೆಯಲ್ಲಿ ಯಾವುದೇ ವ್ಯವಹಾರವನ್ನು ಮಾಡಬೇಕಾದರೆ ನನ್ನ ಹೆಂಡತಿಗೂ ಸಹ ತಿಳಿಸಿ ಮಾಡುತ್ತೇನೆ. ದೂರಿನಲ್ಲಿ ನಮೂದಿಸಿರುವ ಆರೋಪಿಯ ವಿಳಾಸದಲ್ಲಿಯೇ ವಾಸವಾಗಿರುತ್ತೇವೆ. ರಾಜೇಶ್ವರಿ ವೀರಭದ್ರಗೌಡ ಎಂಬುದು ನನ್ನ ಹೆಂಡತಿಯ ಆರೋಪಿಯ ಹೆಸರಾಗಿದ್ದು ಆ ಹೆಸರಿನವರು ನಮ್ಮ ಊರಿನಲ್ಲಿರುವುದಿಲ್ಲ. ಆದರೆ ವೀರಭದ್ರಗೌಡ ಎಂಬುವವರು ನಮ್ಮ ಊರಿನಲ್ಲಿ 3 ಜನ ಇದ್ದಾರೆ. ನಮ್ಮ ಊರಿನಲ್ಲಿ ಒಟ್ಟು 100 ಮನೆಗಳು ಇವೆ. ರಾಜೇಶ್ವರಿ ಕೋಂ ವೀರಭದ್ರಗೌಡ ಎಂಬ ವಿಳಾಸಕ್ಕೆ ಅಂಚೆ ಪತ್ರಗಳು ಬರುತ್ತವೆ ಆದರೆ ಅದು ನಮ್ಮ ಮನೆ ಆಗಿರುತ್ತದೆ. ಈಗ ತೋರುತ್ತಿರುವ ನನ್ನ ಸಾಕ್ಷ್ಯ ವಿಚಾರಣೆಯಲ್ಲಿರುವ ಸಹಿ ನನಗೆ ಗೊತ್ತಾಗುವುದಿಲ್ಲ. ಆದರೆ ನಿಪಿ–5 ರಲ್ಲಿರುವ ಸಹಿ ನನ್ನದಾಗಿರುತ್ತದೆ. ದೂರುದಾರರು ಕಳುಹಿಸಲಾದ ಕಾನೂನು ಬದ್ಧ ನೋಟಿನ ಪ್ರತಿಯನ್ನು ನಾನು ನಮ್ಮ ಹೆಂಡತಿಯ ಪರ ವಕೀಲರಿಗೆ ನೀಡಿರುತ್ತೇನೆ. ಆ ನೋಟಿಸಗೆ ಮರು ಉತ್ತರ ನೀಡಿರುವುದಿಲ್ಲ ಅದೇ ರೀತಿ ಆ ಮರು ಉತ್ತರ ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ನನ್ನ ಎಲ್ಲಾ ಹಣಕಾಸಿನ ವ್ಯವಹಾರಗಳನ್ನು ಶಿರಸಿಯಲ್ಲಿರುವ ಕೆ ಡಿ ಸಿ ಸಿ ಬ್ಯಾಂಕ್ ಮೂಲಕವೇ ಮಾಡುತ್ತೇನೆ. ಆ ಬ್ಯಾಂಕ್ ನಲ್ಲಿ ಚೆಕ್ ಸೌಲಭ್ಯವು ಸಹ ಇದೆ. ನಾನು ಯಾವುದೇ ವ್ಯಕ್ತಿಗೆ ಚೆಕ್ ನೀಡಬೇಕಾದರೆ ನಾನು ಮಾಡಿದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಚೆಕ್ ನೀಡುತ್ತೇನೆ. ನಾನು ನನ್ನ ಖಾತೆಯಲ್ಲಿ ಹಣ ಇದ್ದರೆ ಮಾತ್ರ ಚೆಕ್ ನೀಡುತ್ತೇನೆ ಆರೋಪಿ ತನ್ನ ಖಾತೆಯಲ್ಲಿ ಹಣ ಇಲ್ಲದೇ ಇದ್ದರೂ ಸಹ ನೀಡುತ್ತಾರೆ ಎಂದರೆ ಸಾಕ್ಷಿಯು ಆ ಚೆಕ್ ಕೊಟ್ಟ ಸಂದರ್ಭದಲ್ಲಿ ಆರೋಪಿಯ ಖಾತೆಯಲ್ಲಿ ಹಣ ಇತ್ತು ಎಂದು ಸ್ವತಃ ನುಡಿಯುತ್ತಾರೆ. ಆರೋಪಿ ಆ ಚೆಕ್ ನ್ನು ದೂರುದಾರರಿಗೆ ರೂ. 1 ಲಕ್ಷದ 32 ಸಾವಿರಗಳಿಗೆ ನೀಡಿರುತ್ತಾರೆ. ಆ ಚೆಕ್ ನ್ನು ದೂರುದಾರರಿಗೆ ಯಾವ ದಿನಾಂಕದಂದು ಕೊಟ್ಟಿವು ಎಂಬುದು ನನಗೆ ಈಗ ನೆನಪಿಲ್ಲ.

2. ನಾನು ದೂರುದಾರರ ಜೊತೆ ವ್ಯವಹಾರ ಮಾಡುವ ಸಂದರ್ಭದಲ್ಲಿ ಆರೋಪಿ ನನ್ನ ಜೊತೆ ಬಂದಿರಲಿಲ್ಲ. ದೂರುದಾರರು ಮತ್ತು ಆರೋಪಿ ನಡುವೆ ಯಾವುದೇ ಸಂಪರ್ಕ

ಇರುವುದಿಲ್ಲ. ನಿಪಿ-1 ರಂತಹ ಚೆಕ್ ಆರೋಪಿಯದ್ದಾಗಿದ್ದು ಈ ಬಗ್ಗೆ ದೂರುದಾರರು ನನ್ನನ್ನು ಕೇಳಲಾಗಿ ಆ ಚೆಕ್ ನ್ನು ಸುರಕ್ಷತೆಗಾಗಿ ಇಟ್ಟುಕೊಳ್ಳುವಂತೆ ದೂರುದಾರರಿಗೆ ತಿಳಿಸಿರುತ್ತೇನೆ. ಆರೋಪಿಯೇ ತನಗೆ ಸೇರಿದ ಚೆಕ್ ನ್ನು ನನ್ನ ಮೂಲಕ ದೂರುದಾರರಿಗೆ ನೀಡಲು ಅನುಮತಿ ನೀಡಿದ್ದರು ಆದರೆ ಈ ಬಗ್ಗೆ ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ನಾನು ದೂರುದಾರರ ಅಂಗಡಿಗೆ ಜೊತೆ ಸುಮಾರು 7 ರಿಂದ 8 ಬಾರಿ ಹೋಗಿರುತ್ತೇನೆ. ನಾನು ದೂರುದಾರರ ಜೊತೆ ಒಂದೇ ವ್ಯವಹಾರ ಮಾಡುವ ಸಲುವಾಗಿ ಸುಮಾರು 2 ರಿಂದ 3 ಬಾರಿ ಹೋಗುವುದು ಬರುವುದು ಮಾಡಿರುತ್ತೇನೆ. ಆದರೆ ಯಾವ ಯಾವ ದಿನಾಂಕಗಳಂದು ಹೋಗಿದ್ದೇನು ಎಂದು ಈಗ ಹೇಳಲಾಗುವುದಿಲ್ಲ. ಆ ದಿನಾಂಕಗಳನ್ನು ಈ ಬಗ್ಗೆ ಪ್ರಕರಣ ದಾಖಲಾದ ನಂತರ ತಿಳಿದುಕೊಂಡು ಹೇಳಲು ನನ್ನ ತಲೆಗೆ ಹೊಗದೇ ಇರುವುದರಿಂದ ಹೇಳಲಾಗುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ. ನಾನು ಹಾಜರು ಪಡಿಸಿರುವ ನಿಡಿ-2, 3, ಮತ್ತು 6 ರಂತಹ ದಾಖಲೆಗಳು ಈ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-2, 3 ಮತ್ತು 6 ರ ನನ್ನ ಮತ್ತು ದೂರುದಾರರ ನಡುವೆ ಆದ ಬೇರೆ ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲೆಗಳು ಆಗಿದ್ದು ಈ ಪ್ರಕರಣಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ದೂರುದಾರರು ರೂ. 4 ಲಕ್ಷ ಬೆಳೆ ಬಾಳುವ ಆಭರಣಗಳನ್ನು ಮಾಡಿಸಿಕೊಂಡು ಆ ಬಾಬ್ತು ರೂ. 2 ಲಕ್ಷದ 2 ಸಾವಿರ ಗಳನ್ನು ಪಾವತಿ ಮಾಡಿ ಉಳಿದ ಹಣವನ್ನು ಆ ನಂತರ ಕೊಡುತ್ತೇನೆಂದು ದೂರುದಾರರಿಗೆ ತಿಳಿದ್ದರು ಎಂದರೆ ಸರಿಯಲ್ಲ. ದೂರುದಾರರು ಉಳಿದ ಹಣವನ್ನು ವಾಪಸ್ಸು ಕೊಡುವಂತೆ ಜೂನ್-2024 ರಂದು ಆರೋಪಿಯನ್ನು ಕೇಳಲಾಗಿ ಅವರು ನಿಪಿ-1 ರಂತಹ ಚೆಕ್ ನ್ನು ಬ್ಯಾಂಕ್ ನಲ್ಲಿ ಹಣ ತೆಗೆದುಕೊಳ್ಳುವಂತೆ ಹೇಳಿ ದೂರುದಾರರಿಗ ಕೊಟ್ಟರು ಎಂದರೆ ಸರಿಯಲ್ಲ. ಆರೋಪಿ ದೂರುದಾರರಿಂದ ಪಡೆದ ಚಿನ್ನಕ್ಕೆ ಸಂಬಂಧಪಟ್ಟಂತೆ ಬೇರೆ ಚೀಟಿಗಳನ್ನು ಬರೆದುಕೊಟ್ಟಿದ್ದರೂ ಸಹ ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸದೇ ನನ್ನ ಮತ್ತು ದೂರುದಾರರ ನಡುವೆ ಆದ ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದೂರುದಾರರಿಗೆ ನೀಡಬೇಕಾದ ರೂ. 1 ಲಕ್ಷದ 30 ಸಾವಿರ ಹಣ ಬಾಕಿ ಕೊಡಬೇಕೆಂಬ ಬಗ್ಗೆ ನಾನು ಹಾಜರು ಪಡಿಸಿರುವ ನಿಡಿ-2, 3 ಮತ್ತು 6 ರಂತಹ ದಾಖಲೆಗಳಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ದೂರುದಾರರಿಗೆ ನೀಡಬೇಕಾದ ರೂ. 1 ಲಕ್ಷದ 98 ಸಾವಿರ ಕ್ಕೆ ಸಂಬಂಧಪಟ್ಟಂತೆ ನೀಡಲಾದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದೂುರದಾರರ ಪಾಟೀ ಸವಾಲನ್ನು ಮಾಡಲು ನಾನು ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇನೆ.

3. ದೂರುದಾರರು ಆರೋಪಿ ಜೊತೆ 2021 ರಂದು ಮಾಡಿಕೊಂಡ ವ್ಯವಹಾರಕ್ಕೆ ಸಬಂಧಪಟ್ಟಂತೆ ಈ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಹಾಜರು ಪಡಿಸಿರುವ ನಿಡಿ–2, ಮತ್ತು 6 ರಲ್ಲಿ ನಮೂದಿಸಲಾದ ಚೆಕ್ ನಂಬರನ್ನು ನಾನೇ ಸೃಷ್ಟಿಸಿಕೊಂಡು ನಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–1 ರಂತಹ ಚೆಕ್ ನ್ನು ದೂರುದಾರರಿಗೆ ಹೊರತು ಪಡಿಸಿ ಬೇರೆ ಯಾರಿಗೂ ನೀಡಿರುವುದಿಲ್ಲ. ನಿಪಿ–1 ರ ಚೆಕ್ ನ್ನು ಆರೋಪಿ ದೂರುದಾರರಿಗೆ ಕೊಡಬೇಕಾದ ರೂ. 1 ಲಕ್ಷದ 98 ಸಾವಿರಕ್ಕೆ ಸಂಬಂಧಪಟ್ಟ ಚೆಕ್ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ದೂರುದಾರರಿಗೆ ನೀಡಬೇಕಾದ ಹಣದಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ನಿಡಿ–2, 3 ಮತ್ತು 6 ರಂತಹ ದಾಖಲೆಗಳನ್ನು ದುರುದ್ದೇಶ ಪೂರ್ವಕವಾಗಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಲಾದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್

**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ./20**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | | ಡಿಡಬ್ಲ್ಯೂ | |
| ತಂದೆ:ಗಂಡನ ಹೆಸರು | : | | | |
| ವಯಸ್ಸು | : | ವರ್ಷ | | |
| ಉದ್ಯೋಗ | : | | | |
| ವಾಸ ಸ್ಥಳ | : | | | |

**ದಿನಾಂಕ:05.11.2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ. ವಕೀಲರಿಂದಃ**

.

**ಪಾಟೀ ಸವಾಲುಃ ಪಿರ್ಯಾದಿದಾರರ ಪರ ಶ್ರೀ. ವಕೀಲರಿಂದಃ**

.

**(ಪಿರ್ಯಾದಿದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್